3. ಕಳ್ಳತನದ ಬಗ್ಗೆ ಮಂಡಲ ಕಾರ್ಯದರ್ಶಿಯು ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಅದನ್ನು ಪೊಲೀಸ್ ಠಾಣೆಯಲ್ಲಿ ದಾಖಲು ಮಾಡಿಕೊಂಡು ತನಿಖೆ ಮಾಡಲಾಗುತ್ತಿದೆ. ಕ್ರೈಂ ನಂಬರ್ 21:93.

4. ಈ 3 ಕ್ವಿಂಟಾಲ್ ಸಕ್ಕರೆಯು ಯಾರಿಗೆ ಸೇರಿದೆ ಎಂಬ ಬಗ್ಗೆ ಸ್ಪಷ್ಟವಾಗಿ ಈ ಹಂತದಲ್ಲಿ ತಿಳಿಯಲು ಸಾಧ್ಯವಾಗಿಲ್ಲವಾದರೂ ಸಹ, ಸದರಿ ಟಿಎಪಿಸಿಎಂಎಸ್‌ನ ಡಿಪೋ ಮ್ಯಾನೇಜರರು ಈ ಪ್ರಕರಣದಲ್ಲಿ ಭಾಗಿಯಾಗಿರುವುದಾಗಿ ಸಂಶಯಿಸಲಾಗಿದೆಯಾದ್ದರಿಂದ ಸಂಪೂರ್ಣ ತನಿಖೆಯನ್ನು ನಡೆಸಲು ಅನುಕೂಲವಾಗುವಂತೆ ಟಿಎಪಿಸಿಎಂಎಸ್‌ನಲ್ಲಿದ್ದ ದಾಖಲಾತಿಗಳನ್ನು ಸರ್ಕಾರದ ವಶಕ್ಕೆ ಪಡೆಯಲಾಗಿದೆ.

5. ತನಿಖೆಯು ಮುಕ್ತಾಯವಾಗಿ ತೀರ್ಮಾನ ಕೈಗೊಳ್ಳುವವರೆಗೆ ಟಿಎಪಿಸಿಎಂಎಸ್ ನ್ಯಾಯಬೆಲೆ ಅಂಗಡಿಯನ್ನು ಅಮಾನತ್ತಿನಲ್ಲಿ ಇಡಲಾಗಿದೆ ಹಾಗೂ ಈ ಗ್ರಾಮದ ಕಾರ್ಡುದಾರರಿಗೆ ನ್ಯಾಯಬೆಲೆ ವಸ್ತುಗಳನ್ನು ವಿತರಿಸಲು ಪ್ರತ್ಯೇಕ ವ್ಯವಸ್ಥೆ ಮಾಡಲಾಗುತ್ತಿದೆ.

6. ಟಿಎಪಿಸಿಎಂಎಸ್‌ನ ಬಿಲ್ ಪುಸ್ತಕ, ದಾಸ್ತಾನು ಪುಸ್ತಕ ಮುಂತಾದವುಗಳ ದಾಖಲಾತಿಗಳು ಆಯಾ ಕಾರ್ಡುದಾರರ ಪಡಿತರ ಚೀಟಿಗಳಲ್ಲಿನ ದಾಖಲಾತಿಗೆ ತಾಳೆ ಇದೆಯೇ ಎಂಬುದನ್ನು ಪರೀಕ್ಷಿಸಲು ಪ್ರತಿಯೊಂದು ಕಾರ್ಡುಗಳನ್ನು ವಿವರವಾಗಿ ಪರಿಶೀಲನೆ ನಡೆಸಬೇಕಾಗಿರುವುದರಿಂದ, ಈ ಎಲ್ಲ ತನಿಖೆ ನಡೆದ ನಂತರ ತಪ್ಪಿತಸ್ಥರೆಂದು ಕಂಡು ಬಂದಲ್ಲಿ ಅಂತಹವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ಬೊಂಬಾಯಿಯಲ್ಲಿ ನಡೆದ ಬಾಂಬ್ ಸ್ಫೋಟನೆಯ ಬಗ್ಗೆ

† ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ):– ಮಾನ್ಯ ಅಧ್ಯಕ್ಷರೇ, ಈ ದಿವಸ ನಾನು, ಶ್ರೀ ವಾಟಾಳ್ ನಾಗರಾಜ್‌ರವರು ಮತ್ತು ಶ್ರೀ ರಾಯರೆಡ್ಡಿಯವರು, ಎರಡು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ಹೇಳಿ ತಮ್ಮ ಪರವಾನಗಿ ಪಡೆದಿದ್ದೇವೆ. ಮೊದಲನೆಯದಾಗಿ ಬೊಂಬಾಬಿಯಲ್ಲಿ ನಡೆದ ಘಟನೆ, ಎರಡನೆಯದಾಗಿ ಶ್ರೀ ಗೋಪಿನಾಥ್ ಸಾಂಡ್ರರವರ ವಿಚಾರ. ಮೊದಲನೆಯದಾಗಿ ಶುಕ್ರವಾರ ಬೊಂಬಾಯಿಯಲ್ಲಿ ನಡೆದಿರತಕ್ಕಂಥ ನರಮೇಧದ ವಿಧ್ವಂಸಕ ಕೃತ್ಯ. ದೇಶದ ಪ್ರಜಾಪ್ರಭುತ್ವದ ಪದ್ಧತಿಯನ್ನು ಬುಡಮೇಲು ಮಾಡತಕ್ಕಂಥ ಈ ದೇಶದ ಆರ್ಥಿಕ ವ್ಯವಸ್ಥೆಯನ್ನು ನಿರ್ನಾಮ ಮಾಡತಕ್ಕಂಥ ಒಂದು ಹೇಯ ಕೃತ್ಯ. ನಾನು ಇದು ಅತ್ಯಂತ ದುಃಖದ ವಿಚಾರವೆಂದು ತಿಳಿದಿರತಕ್ಕವನು. ಈ ಸದನ, ಈ ದಿವಸ ಪ್ರಾರಂಭವಾಗತಕ್ಕಂಥ ಸಂದರ್ಭದಲ್ಲಿ ಪ್ರಶ್ನೋತ್ತರಕ್ಕೆ ಮುಂಚೆ ಈ ಸಭೆಯ ನಾಯಕರಾದ ಮುಖ್ಯಮಂತ್ರಿಗಳು ಒಂದು ನಿರ್ಣಯವನ್ನು ಮಂಡಿಸಿ ನಮಗೆಲ್ಲರಿಗೂ ವಿಷಯವನ್ನು ತಿಳಿಸಿ, ದೇಶದಲ್ಲಿ ಆಗಿರುವಂತಹ ಈ ಒಂದು ಭಯದ ವಾತಾವರಣವನ್ನು ಬಗೆಹರಿಸುವುದಕ್ಕೆ ರಾಜ್ಯದ ಜನತೆಗೆ ಒಂದು ಮನವಿಯನ್ನು ಸಹ ಮಾಡುತ್ತಾರೆ ಎಂದು ನಿರೀಕ್ಷಣೆ ಮಾಡಿದ್ದೆ. ಈಗಲಾದರೂ ಸಹ ಮಾನ್ಯ ಉಪಮುಖ್ಯಮಂತ್ರಿಗಳು ಇದರ ಬಗ್ಗೆ ಒಂದು ನಿರ್ಣಯವನ್ನು ಸದನದಲ್ಲಿ ಮಂಡಿಸಿ, ರಾಜ್ಯದ ಭಯ ಭೀತಗೊಂಡಿರುವಂತಹ ಜನತೆಯ ವಿಶ್ವಾಸವನ್ನು ತೆಗೆದುಕೊಳ್ಳುವುದರ ಜೊತೆಗೆ ಈ ವಿಧ್ವಂಸಕ ಕೃತ್ಯವನ್ನು ಖಂಡನೆ ಮಾಡುವಂತಹ ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರದಲ್ಲಿ ನಿವೇದನೆ ಮಾಡಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ಬೊಂಬಾಯಿ ನಗರ ಆರ್ಥಿಕ ದೃಷ್ಟಿಯಿಂದ ಈ ದೇಶದ ರಾಜಧಾನಿ ಎನ್ನತಕ್ಕಂಥ ಮಾತನ್ನು ಕೇಳಿದ್ದೇವೆ. ದೇಶದ್ರೋಹಿಗಳು ಬೊಂಬಾಯಿ ನಗರವನ್ನೇ ಆರಿಸಿಕೊಳ್ಳಬೇಕಾದರೆ, ಇದು

ಈ ದೇಶದ ಆರ್ಥಿಕ ವ್ಯವಸ್ಥೆಯನ್ನು ಹಾಳು ಮಾಡುವಂತಹ ಮತ್ತು ದೇಶವನ್ನು ಅಭದ್ರಗೊಳಿಸಬೇಕೆಂಬ ದೃಷ್ಟಿಯಿಂದ ಇದನ್ನು ಮಾಡಿರತಕ್ಕದ್ದು ಅತ್ಯಂತ ಹೇಯ ಕೃತ್ಯ; ಖಂಡನೀಯ ಕೃತ್ಯವೆಂದು ಹೇಳುತ್ತೇನೆ. ಈಗಾಗಲೇ ಮಾನ್ಯ ಪ್ರಧಾನಮಂತ್ರಿಯವರು ಸ್ಥಳಕ್ಕೆ ಭೇಟಿ ನೀಡಿ ಅಲ್ಲಿ ಗಾಯಾಳುಗಳನ್ನು ನೋಡಿದ್ದಾರೆ. ಜನಗಳಿಗೆ ಸಾಂತ್ವನ ಹೇಳಿ, ಇದರ ಬಗ್ಗೆ ತನಿಖೆ ಮಾಡುವುದಾಗಿ ಭರವಸೆ ಸಹ ಕೊಟ್ಟಿದ್ದಾರೆ. ಈ ಕೃತ್ಯವನ್ನು ಯಾವ ಕೈಗಳು ಮಾಡಿವೆ, ಆ ಕೈಗಳ ಹಿಂದೆ ಇರುವ ಮಿದುಳನ್ನು ಪತ್ತೆ ಮಾಡುತ್ತೇವೆ ಎಂಬ ಭರವಸೆಯನ್ನು ಕೊಟ್ಟಿದ್ದಾರೆ. ವಿಶ್ವವ್ಯಾಪ್ತಿಯಲ್ಲಿರುವಂತಹ ಯಾವುದೇ ಶಕ್ತಿಯನ್ನು ಹಿಡಿಯುತ್ತೇವೆ ಎಂಬ ಭರವಸೆಯನ್ನು ಸಹ ಕೊಟ್ಟಿದ್ದಾರೆ. ಇದನ್ನೆಲ್ಲಾ ನೋಡಿದರೆ ನಾವು ಪಕ್ಷದ ಭೇದ, ಗುಂಪು, ಪ್ರಾಂತೀಯ ಮನೋಭಾವ ಇವೆಲ್ಲವನ್ನೂ ಬಿಟ್ಟು ದೇಶದ ಸಮಗ್ರತೆ, ಐಕ್ಯತೆಯ ಜೊತೆಗೆ ಆರ್ಥಿಕ ಪರಿಸ್ಥಿತಿಯನ್ನು ಇವತ್ತು ನಿವಾರಣೆ ಮಾಡಲಿಕ್ಕೆ ನಾವೆಲ್ಲರೂ ಸಹ ಒಂದಾಗಿ ಮಾಡಬೇಕಾಗುತ್ತದೆ. ವಿದೇಶಿ ಶಕ್ತಿಗಳನ್ನು, ದೇಶದಲ್ಲಿ ಹಿಂಸೆಯನ್ನು ಪ್ರತಿಪಾದಿಸತಕ್ಕ ಶಕ್ತಿಗಳನ್ನು ಮತ್ತು ಹಿಂಸಾಕೃತ್ಯಗಳಲ್ಲಿ ತೊಡಗಿರುವಂತಹ ಕೃತ್ಯಗಳನ್ನು ನಾವೆಲ್ಲರೂ ಎದುರಿಸುವುದರ ಜೊತೆಗೆ ಇದರ ಜನಾಂದೋಳನೆ ಆಗಬೇಕೆಂದು ನಾನಾದರೂ ಬಯಸತಕ್ಕವನು.

ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿದೆ, ಮಾನ್ಯ ರಾಜೀವ್ ಗಾಂಧಿಯವರು ಈ ವಯಸ್ಸಿನಲ್ಲಿ ಸತ್ತರು ಎಂದು ಹೇಳಿದರೆ ನಮಗೆಲ್ಲರಿಗೂ ಸಹ ದುಃಖ ಬರುತ್ತದೆ. ನಾವೆಲ್ಲರೂ ಸಹ ಆ ಸಂದರ್ಭದಲ್ಲಿ ಗಳಗಳನೇ ಅತ್ತಿದ್ದೇವೆ. ರಾಜಕೀಯವಾಗಿ ನಮಗೆ ವಿರೋಧವಿರಬಹುದು. ಯಾವ ಪಾಪಕ್ಕೋಸ್ಕರ, ಏನು ಮಾಡಿದರು ಎಂದು ಅವರು ಸಾಯಬೇಕು. ಮುಂಬೈನಲ್ಲಿ 300 ಜನ ಸತ್ತಿದ್ದಾರೆ. 3 ಸಾವಿರ ಜನ ಅಲ್ಲಿ ಪ್ರಾಣಕ್ಕೋಸ್ಕರ ಇವತ್ತು ಹೋರಾಟವನ್ನು ಮಾಡುತ್ತಿದ್ದಾರೆ ಎಂದು ಹೇಳಿದರೆ ನಿಜಕ್ಕೂ ಸಹ ಈ ದೇಶ ಉಳಿಯುತ್ತದೆಯೇ ಎನ್ನುವಂತಹ ಭಯ ಅನೇಕ ಸಂದರ್ಭದಲ್ಲಿ ಬರುತ್ತದೆ. ನಮ್ಮ ರಾಜಕೀಯ ವೈಯುಕ್ತಿಕ ಆಸೆ ಆಕಾಂಕ್ಷೆಗಳನ್ನು ಇವತ್ತು ಬದಿಗೊತ್ತಿ, ನಾವೆಲ್ಲರೂ ಸಹ ಒಗ್ಗಟ್ಟಿನಿಂದ ಈ ಶಕ್ತಿಗಳನ್ನು ಎದುರಿಸಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ, ಮುಂಬೈ ಜನರನ್ನು ನಾವು ಮೆಚ್ಚಬೇಕು. ಏಕೆಂದರೆ ತಾವು ದೂರದರ್ಶನದಲ್ಲಿ ನೋಡಿರಬಹುದು, ಕೆಲವು ಜನ ರಕ್ತ ಕೊಟ್ಟಿದ್ದಾರೆ ಮತ್ತು ಯಾವ ರೀತಿಯಲ್ಲೂ ಸಹ ಸರ್ಕಾರ ಎಚ್ಚರಿಕೆಯಿಂದ ಇರುವುದಕ್ಕೆ ಏನು ಸಹಕಾರ ಬೇಕು ಅದನ್ನು ಕೊಡುತ್ತೇವೆ ಎನ್ನುವಂತಹ ಒಂದು ಭರವಸೆಯನ್ನು ರಕ್ತದಾನ ಮಾಡುವುದರ ಮೂಲಕ ನಿನ್ನೆ ದಿವಸ ತೋರಿಸಿದ್ದಾರೆ ಮತ್ತು ಸ್ಕೂಟರ್‌ನಲ್ಲಿ ಬಾಂಬ್ ಇದೆ ಎಂದು ಅದನ್ನು ಸರ್ಕಾರದ ಗಮನಕ್ಕೆ ತಂದು ಪತ್ತೆ ಮಾಡುವುದಕ್ಕೂ ಸಹ ಸಹಕಾರ ಮಾಡಿದ್ದಾರೆ. ಆ ಕಾರಣದಿಂದಾಗಿ ಮಾನ್ಯ ಅಧ್ಯಕ್ಷರೇ, ಈ ಮೃತ ಹೊಂದಿದವರ ಬಗ್ಗೆ ಸಂತಾಪವನ್ನು ಸೂಚನೆ ಮಾಡುತ್ತೇನೆ ಹಾಗೂ ನೊಂದವರ ಕುಟುಂಬದವರಿಗೆ ಸಾಂತ್ವನ ಹೇಳುತ್ತೇನೆ. ಈ ವಿಧ್ವಂಸಕ ಕೃತ್ಯಗಳನ್ನು ಮಾಡಿರತಕ್ಕಂಥ ಈ ಶಕ್ತಿಗಳನ್ನು ಖಂಡನೆ ಮಾಡಿ ಈ ಸದನದಲ್ಲಿ ಸಭಾನಾಯಕರು ಅಥವಾ ಉಪಮುಖ್ಯಮಂತ್ರಿಗಳು ನಿರ್ಣಯವನ್ನು ಮಂಡಿಸಬೇಕು ಎಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಾ, ಮಾನ್ಯ ಮುಖ್ಯ ಮಂತ್ರಿಗಳು ಈಗಾಗಲೇ ಒಂದು ಪತ್ರಿಕೆಯ ಹೇಳಿಕೆ ಮೂಲಕ ಮೃತಪಟ್ಟವರ ಗೌರವಾರ್ಥ ಶುಕ್ರವಾರ ಸಂತಾಪ ಸೂಚನೆಯನ್ನು ವ್ಯಕ್ತಮಾಡಿದ್ದಾರೆ. ತುಂಬಾ ಸಂತೋಷ ಹಾಗೂ ನಮ್ಮ ರಾಜ್ಯದಲ್ಲಿ ಇದರ ಬಗ್ಗೆ ಏನು ಬಿಗಿ ಕ್ರಮ ತೆಗೆದುಕೊಂಡಿದ್ದಾರೆ ಎನ್ನುವುದರ ಬಗ್ಗೆಯೂ ಸಹ ಈ ಸದನಕ್ಕೆ ವಿಶ್ವಾಸವನ್ನು ತಗೆದುಕೊಂಡು ತಿಳಿಸಬೇಕು. ನೀವು ಏನು ಮಾಡಬೇಕು ಎಂದು ಇದ್ದೀರಿ, ರಾಜ್ಯದ ಜನತೆಯಿಂದ, ನಮ್ಮಿಂದ ತಾವು ಏನು ಸಹಾಯವನ್ನು ನಿರೀಕ್ಷೆ ಮಾಡುತ್ತಿದ್ದೀರಿ ? ಇದು ಕೇವಲ ಮುಂಬೈಗೆ ಅಷ್ಟೇ ಸೀಮಿತವಾಗಿರತಕ್ಕಂಥ ಪ್ರಶ್ನೆಯಲ್ಲ. ಇವತ್ತು ಇಡೀ ದೇಶದಲ್ಲಿ ಬುಡಮೇಲು ಕೃತ್ಯ ಮಾಡತಕ್ಕಂಥ, ಅನೇಕ ಶಕ್ತಿಗಳು ಇವೆ. ಅವುಗಳ ವಿರುದ್ಧ ನಾವು ಹೋರಾಟ ಮಾಡಬೇಕಾದರೆ ಸರ್ಕಾರ ಏನು ಕಾರ್ಯಕ್ರಮ ಹಾಕಿಕೊಂಡಿದೆ ಎಂದು ತಿಳಿಸಬೇಕು. ನಮ್ಮೆಲ್ಲರ ನೊಂದ ಹೃದಯದ ನೋವನ್ನು ಅಲ್ಲಿ

ಮೃತಪಟ್ಟಿರುವ ಜನಗಳ ಆತ್ಮಕ್ಕೆ ಶಾಂತಿಯನ್ನು ಕೋರುವುದರ ಜೊತೆಗೆ ಅವರ ಕುಟುಂಬದವರಿಗೆ ಒಂದು ಸಾಂತ್ವನದ ನುಡಿಯನ್ನು ಸಹ ನಾವು ತಮ್ಮ ಮೂಲಕ ತಿಳಿಸುತ್ತೇವೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈ ನಿರ್ಣಯದ ನಂತರ ಮತ್ತೊಂದು ಬಹಳ ಮಹತ್ವದ ವಿಚಾರ ಇದೆ. ಅದಕ್ಕೂ ತಾವು ಅವಕಾಶ ಕೊಡಬೇಕು ಎಂದು ಕೇಳುತ್ತೇನೆ.

† ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ, ಮುಂಬೈ ನಗರದಲ್ಲಿ ನಡೆದಿರತಕ್ಕಂಥ ಈ ಒಂದು ದುರ್ಘಟನೆಗೆ ಇಡೀ ದೇಶದ ಮಾನವಕುಲವೇ ತಲ್ಲಣಿಸಿದಂತಾಗಿದೆ. ಇದು ಹೆಸರಿಗೆ ಮಾತ್ರ ಮುಂಬಯಿ ನಗರದಲ್ಲಿ ನಡೆದಿದೆ. ಈ ಒಂದು ಕೃತ್ಯ ಇಡೀ ದೇಶದ ಉದ್ದಗಲಕ್ಕೂ ನಡೆಯತಕ್ಕಂಥ ವ್ಯವಸ್ಥಿತವಾದಂತಹ ಕೃತ್ಯವಾಗಿರಬಹುದು ಎಂದು ನಮಗೆ ಅನಿಸುತ್ತದೆ. ಇದರ ಹಿಂದೆ ಇರತಕ್ಕಂಥ ಪಿತೂರಿ ಏನು ? ನಾವು ಪ್ರತಿ ಸಾರಿ ಏನು ಮಾಡುತ್ತಿದ್ದೇವೆ ಎಂದರೆ, ಇಂತಹ ಪ್ರಕರಣಗಳು ಬಂದಾಗ ಮಾತ್ರ ಎಚ್ಚರ ವಹಿಸುತ್ತೇವೆ. ತಮಗೆ ಅದು ಅನುಭವವಾಗಿರಬಹುದು. ನಾವು ಶಾಸನಸಭೆಗೆ ಬರುವಾಗ ಶಾಸನಸಭೆಯ ಸುತ್ತ ಒಂದು ರೀತಿಯ ಭಯದ ವಾತಾವರಣ ಇದೆ ಮತ್ತು ತುರ್ತು ಪರಿಸ್ಥಿತಿಯ ಘೋಷಣೆ ರೂಪ ಕಾಣುತ್ತಿದೆ. ಇಲ್ಲಿಗೆ ಬರತಕ್ಕಂಥ ವಾಹನಗಳನ್ನೆಲ್ಲ ಒಂದು ಕಡೆ ಬಿಡುತ್ತಿದ್ದಾರೆ ಮತ್ತು ಜನಗಳನ್ನು ತಡೆಯುತ್ತಿದ್ದಾರೆ. ಇದು ಎಷ್ಟು ದಿನ ನಡೆಯುತ್ತದೆ ? ಇವತ್ತು ಅಥವಾ ನಾಳೆ. ನಾಳೆ ನಂತರ ಯಥಾಸ್ಥಿತಿ ಮೊದಲಿನ ಹಾಗೆ ಆಗುತ್ತದೆ. ತಮಗೆ ತಿಳಿದಿರಬಹುದು. ಇವತ್ತು ಈ ಒಂದು ಕೃತ್ಯದಲ್ಲಿ ತಮಿಳು ವ್ಯಾಘ್ರಗಳ ಕೈವಾಡ ಇದೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಹಿಂದೆ ರಾಜೀವ್ ಗಾಂಧಿಯವರ ಕೊಲೆಗೆ ಕಾರಣವಾದಂತಹ ತಮಿಳು ವ್ಯಾಘ್ರಗಳ ಮುಖಂಡರೊಬ್ಬರು ಬೆಂಗಳೂರು ನಗರದಲ್ಲೇ ವಾಸ ಮಾಡುತ್ತಿದ್ದರು. ಆ ಮನುಷ್ಯನನ್ನು ಪತ್ತೆ ಹಚ್ಚುವುದಕ್ಕೆ ಬೆಂಗಳೂರು ನಗರದ ಪೊಲೀಸ್ ಸಂಪೂರ್ಣವಾಗಿ ವಿಫಲವಾಗಿತ್ತು. ಅಲಗೂರಿನ ಹತ್ತಿರ ಒಂದು ಮುತ್ತತ್ತಿ ಎಂದು ಇದೆ. ಅಲ್ಲಿಂದ ಪತ್ತೆ ಹಚ್ಚುವ ಕಾರ್ಯ ಪ್ರಾರಂಭವಾಗಿ ಕೊನೆಯಲ್ಲಿ ಅವರು ಬೆಂಗಳೂರಿನಲ್ಲಿ ಇದ್ದಾರೆ ಎಂದು ಅವರನ್ನು ಹಿಡಿದಿದ್ದು ಆಯಿತು ಮತ್ತು ಇತ್ತೀಚಿನ ದಿನಗಳಲ್ಲಿ ಕರ್ನಾಟಕದಲ್ಲೂ ತಮಿಳು ವ್ಯಾಘ್ರಗಳ ನೆಲೆ ಇದೆ, ಅವರು ಇಲ್ಲಿ ಆಸ್ತಿಯನ್ನು ಮಾಡಿದ್ದಾರೆ ಮತ್ತು ಮನೆಗಳನ್ನು ಕಟ್ಟಿದ್ದಾರೆ ಎನ್ನುವಂತಹ ವಿಚಾರ ಪತ್ರಿಕೆಯಲ್ಲಿ ಬಂದಿದೆ. ಇನ್ನೂ ಬೇರೆ ಬೇರೆ ವಿಚಾರಗಳು ಇವೆ. ಈ ಬಗ್ಗೆ ಸರ್ಕಾರ ತಮ್ಮಲ್ಲಿ ಇರತಕ್ಕಂತಹ ಮಾಹಿತಿಯನ್ನು ಈ ಸದನದ ಮುಂದೆ ಮಂಡಿಸಬೇಕು ಮತ್ತು ಬೊಂಬಾಯಿ ನಗರ, ದೆಹಲಿ ನಗರದಷ್ಟೇ ಈ ಬೆಂಗಳೂರು ನಗರದ ಮೇಲೆ ಅನೇಕ ರೀತಿಯ ಕಣ್ಣುಗಳು ಇವೆ. ಹಿಂದೆ ಎಲ್ಲಾ ತಾವು ನೋಡಿದ್ದೀರಿ. ಕಾವೇರಿ ಸಂದರ್ಭದಲ್ಲಿ ಅನೇಕ ನಮ್ಮ ನೀರಾವರಿ ಜಲಾಶಯಗಳ ಬಗ್ಗೆಯೂ ಕೆಲವು ವಿಚಾರದಲ್ಲಿ ಕಣ್ಣು ಇಟ್ಟಿದ್ದರು. ಇಂತಹ ಅನೇಕ ಪ್ರಚೋದನಕಾರಿಯಾದಂತಹ ವಿಚಾರಗಳು, ಗಂಭೀರವಾದಂತಹ ಪರಿಸ್ಥಿತಿ ಕರ್ನಾಟಕವನ್ನು ಕಾಡಿಸುತ್ತಾ ಇದೆ. ಈ ದೇಶದಲ್ಲಿ ಪ್ರಪ್ರಥಮವಾಗಿ ನಡೆದಂತಹ ದೊಡ್ಡ ದುರ್ಘಟನೆ ಎಂದರೆ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಮಹಾತ್ಮ ಗಾಂಧಿಯವರನ್ನು ಗುಂಡಿಟ್ಟು ಕೊಂದ ನಂತರ, ಗುಂಡಿಟ್ಟು ಕೊಲ್ಲುವುದು ರಸ್ತೆ ರಸ್ತೆಯಲ್ಲಿ, ಬೀದಿ ಬೀದಿಯಲ್ಲಿ ಒಂದು ರೀತಿಯ ಆಟವಾಗಿದೆ ಮತ್ತು ಈ ದೇಶವನ್ನು ಒಡೆಯತಕ್ಕಂಥ ಶಕ್ತಿಗಳು ಜಾಸ್ತಿಯಾಗಿವೆ. ಈ ದೇಶದಲ್ಲಿ ಅಪಾರವಾದಂತಹ ಒಂದು ದೊಡ್ಡ ಭಯೋತ್ಪಾದನೆ ಎಲ್ಲಾ ಮೂಲೆಯಲ್ಲೂ ನಡೆಯುತ್ತಾ ಇದೆ. ಇಂತಹ ಪರಿಸ್ಥಿತಿ ಇರುವಾಗ ನಾವು ನಮ್ಮ ಎಲ್ಲಾ ವಿಧವಾದಂತಹ ಪಕ್ಷಭೇಧವನ್ನು ಮರೆತು ಈ ದೇಶ ಭದ್ರವಾಗಿರಬೇಕು ಮತ್ತು ದೇಶದ ಐಕ್ಯತೆಗೋಸ್ಕರ ಸಹಕಾರ ಮಾಡಬೇಕು. ದೇಶದಲ್ಲಿ ಯಾವುದೇ ಸರ್ಕಾರವಿರಲಿ, ಸರ್ಕಾರದ ರಕ್ಷಣೆಗೆ ಮತ್ತು ಸರ್ಕಾರದ ಆಡಳಿತ ಭದ್ರವಾಗಿ ನಡೆಯುವುದಕ್ಕೆ ನಾವೆಲ್ಲರೂ ಸಹ ಸಹಕಾರ ಮಾಡಬೇಕಾಗುತ್ತದೆ.

ಅಂಥ ಸಂದರ್ಭದಲ್ಲಿ ಬೆಂಗಳೂರಿನ ಜನತೆ ಕರ್ನಾಟಕ ಜನತೆಯ ಪರವಾಗಿಯೂ ಸಹ

ಬೊಂಬಾಯಿ ನಗರದಲ್ಲಿ ನಡೆದಿರತಕ್ಕಂಥ ಕೃತ್ಯ ಅದರಲ್ಲಿ ಸಾವಿಗೆ ಈಡಾದಂಥ ಜನರನ್ನು ನಾವು ಅನುಕಂಪದಿಂದ ಸ್ಮರಿಸುತ್ತೇವೆ, ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇವೆ. ಇದರ ಜೊತೆಗೆ ಮಾನ್ಯ ಮುಖ್ಯಮಂತ್ರಿಗಳೂ ಸಹ ಮಹಾರಾಷ್ಟ್ರ ಸರ್ಕಾರಕ್ಕೆ ಎಲ್ಲಾ ರೀತಿಯ ನೆರವನ್ನು ಕೊಡುತ್ತೇವೆ ಎಂದು ಹೇಳಿ ಒಂದು ಒಳ್ಳೆಯ ಸಂಪ್ರದಾಯವನ್ನು ಮಾಡಿರತಕ್ಕಂಥದ್ದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. ಜೊತೆಗೆ ಅಲ್ಲಿ ಪರಿಹಾರ ಕೊಡುವುದರಲ್ಲಿ ನಮ್ಮಗಳ ಪಾಲು, ಈ ಶಾಸಕರ ಪಾಲನ್ನು ಕೇಳುವುದಾದರೆ ನಾವು ನೀವು ಎಷ್ಟು ಕೇಳುತ್ತೀರಿ ಅಷ್ಟನ್ನು ಕೊಡುವುದಕ್ಕೆ ನಮ್ಮ ಕೈಯಲ್ಲಿ ಆದಷ್ಟೂ ಕೊಡುವುದಕ್ಕೆ ಇಡೀ ಸದನ ನಾನಂತೂ ಪ್ರಾಮಾಣಿಕವಾಗಿ ಒಪ್ಪುತ್ತೇನೆ. ಅಧ್ಯಕ್ಷರವರು ತಾವು ಏನು ತೀರ್ಮಾನ ತೆಗೆದುಕೊಳ್ಳುತ್ತೀರೋ, ಇಲ್ಲ ಒಂದು ತಿಂಗಳ ಸಂಬಳ ಬಿಡಿ ಎಂದು ಹೇಳಿದರೂ ಅದನ್ನು ಬಿಡುವುದಕ್ಕೂ ತಯಾರು. ನೀವು ಎಷ್ಟು ಕೇಳುತ್ತೀರಿ, ಅದನ್ನು ಕೊಡುವುದಕ್ಕೆ ತಯಾರು. ಅದರಲ್ಲಿ ಹಿಂದೆ ಮುಂದೆ ಇಲ್ಲ. ನಾವು ತೀರ್ಮಾನಕ್ಕೆ ಬಂದಿದ್ದೇವೆ. ಅದೆಲ್ಲಕ್ಕಿಂತ ಹೆಚ್ಚಾಗಿ ಬಾಂಬೆ ನಗರದಲ್ಲಿ ಏನಾಯಿತು ಆಯಿತು, ಆದಕ್ಕೋಸ್ಕರ ಎಲ್ಲಾ ನಗರಗಳಲ್ಲೂ ಎಚ್ಚರ ಇರಬೇಕು. ಎಲ್ಲೊ ಒಂದು ಕಡೆ ಆದ ತಕ್ಷಣ ಎಚ್ಚರ ಇರುವಂಥದ್ದಲ್ಲ. ಮಾನ್ಯ ಮುಖ್ಯಮಂತ್ರಿಗಳೇ ತಮಗೆ ಹೇಳುತ್ತಿದ್ದೇನೆ, ಈ ಕರ್ನಾಟಕವೂ ಸಹ ಶಾಂತವಾಗಿದೆ ಎಂದು ನಾನಂತೂ ಅಂದುಕೊಂಡಿಲ್ಲ. ಮೇಲೆ ನೋಡುವುದಕ್ಕೆ ಬೂದಿ ಮುಚ್ಚಿದೆ, ಒಳಗಡೆ ಕೆಂಡ ಇದ್ದ ಹಾಗೆ ಇದೆ. ನಮ್ಮ ಕರ್ನಾಟಕದಲ್ಲಿ ಹೊರಗಡೆಯಿಂದ ಬರತಕ್ಕಂಥ ಜನರು ಯಾರು ? ಎಲ್ಲೆಲ್ಲಿ ಇದ್ದಾರೆ ? ಯಾವ ಯಾವ ಹಳ್ಳಿಯಲ್ಲಿ ಯಾವ ಯಾವ ಮೂಲೆಯಲ್ಲಿ ಇದ್ದಾರೆ, ಬರತಕ್ಕಂಥ ಜನರು ಯಾರು ? ಅವರ ಹಿಂದೆ ಇರತಕ್ಕಂಥ ಚರಿತ್ರೆ ಏನು ? ಅವರ ವ್ಯವಸ್ಥೆ ಏನು ? ಇದೆಲ್ಲ ನಾವು ನೋಡಬೇಕಾಗಿದೆ. ಬೆಂಗಳೂರು ನಗರ ತಮಗೆ ಗೊತ್ತಿರುವಂತೆ ವಿಪರೀತವಾಗಿ ಬೆಳೆದುಬಿಟ್ಟಿದೆ. ಯಾರ ಕಣ್ಣಿಗೂ ಕಾಣದೇ ಇರುವಂಥ ರೀತಿಯಲ್ಲಿ ಯದ್ವಾತದ್ವ ಬೆಳೆಯುತ್ತಿದೆ. ಈ ಮಾತನ್ನು ಪತಕ್ಕೆ ತಮಗೆ ಹೇಳುತ್ತಿದ್ದೇನೆಂದರೆ, ಶಿವರಸನ್ ಎನ್ನುವ ಮನುಷ್ಯ ಆ ಭಯೋತ್ಪಾದನೆ ಇರತಕ್ಕಂಥ ಮನುಷ್ಯ ಈ ಊರಿನಲ್ಲಿ ಇದ್ದಾಗ ಯಾರ ಕೈಯಲ್ಲೂ ಪತ್ತೆ ಹಚ್ಚುವುದಕ್ಕೆ ಆಗಲಿಲ್ಲ. ಈ ಊರಿನಲ್ಲಿ ಎರಡು ತಿಂಗಳ ಕಾಲ ಓಡಾಡಿದ್ದಾನೆ ಎಂದರೆ ಎಷ್ಟು ಭಯಭೀತಿ ಬರುತ್ತಿದೆ ? ಇದರ ಜೊತೆಗೆ ವೀರಪ್ಪನ್ನನ್ನೂ ಸಹ ಹಿಡಿಯುವುದಕ್ಕಾಗುವುದಿಲ್ಲ. ಇಂಥ ಪರಿಸ್ಥಿತಿ ಇದೆ. ಒಂದರ ಹಿಂದೆ ಒಂದು ಇದೆ. ಈ ರೀತಿಯ ಒಂದು ಕೊಂಡಿ ಇದೆ. ಅದಕ್ಕೆ ತಮ್ಮಲ್ಲಿ ನಾನು ಅತ್ಯಂತ ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ, ಸರ್ಕಾರಕ್ಕೆ, ಮಾನ್ಯ ವೀರಪ್ಪಮೊಯಿಲಿಯವರಿಗೆ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಇದನ್ನು ತಾವು ಗಂಭೀರವಾಗಿ ಪರಿಗಣಿಸಬೇಕು ಮತ್ತು ಕರ್ನಾಟಕದ ಉದ್ದಗಲಕ್ಕೂ ನಮ್ಮಲ್ಲಿ ಅನೇಕ ಜಲಾಶಯಗಳಿವೆ. ದೊಡ್ಡ ದೊಡ್ಡ ಭಾರೀ ಮಹಡಿ ಕಟ್ಟಡಗಳಿವೆ. ಸರ್ಕಾರಿ ಕಟ್ಟಡಗಳಿವೆ. ದೊಡ್ಡ ದೊಡ್ಡ ದೇವಸ್ಥಾನಗಳಿವೆ. ಇದರ ಬಗ್ಗೆಯೂ ತಾವು ಚಿಂತನೆ ಮಾಡಬೇಕು ಮತ್ತು ವಿರೋಧಪಕ್ಷಗಳು ತಾವು, ತಮ್ಮ ಮುಖಂಡರುಗಳು ಸೇರಿ ಈ ಕೂಡಲೇ ತಕ್ಷಣಕ್ಕೆ ಒಂದು ಸಭೆಯನ್ನು ಕರೆಯಬೇಕು. ಕರೆದು ಮುಂದೆ ಏನು ಕಾರ್ಯಕ್ರಮವನ್ನು ಕೈಗೊಳ್ಳಬೇಕು ಎನ್ನುವ ಬಗ್ಗೆ ಚಿಂತನೆ ಮಾಡಿ. ನಿಮ್ಮ ಕೈಗೆ ನಮ್ಮ ಸಂಪೂರ್ಣವಾದ ಬೆಂಬಲವನ್ನು ಕೊಡುತ್ತೇವೆ. ಅದರಲ್ಲೇನೂ ಎರಡನೇ ಅಭಿಪ್ರಾಯವಿಲ್ಲ. ಆದ್ದರಿಂದ ತಾವು ಈ ಕ್ರಮವನ್ನು ಅತ್ಯಂತ ಗಂಭೀರ ಪರಿಸ್ಥಿತಿಯಲ್ಲಿ ಚಿಂತನೆ ಮಾಡಬೇಕು. ಬಾಂಬೆ ಎನ್ನತಕ್ಕಂಥದ್ದು ಒಂದೇ ಅಲ್ಲ. ಕರ್ನಾಟಕದಲ್ಲೂ ಸಹ ಆ ಪರಿಸ್ಥಿತಿ ಇದೆ. ಹಿಂದೆ ನಡೆದಂಥ ಬೀದರ್ ಗಲಾಟೆಯನ್ನು ತಾವು ನೋಡಿದ್ದೀರಿ. ಇಂಥ ಅನೇಕ ಘಟನೆಗಳು ನಡೆದಿದೆ. ಈಗ ಕರ್ನಾಟಕದಲ್ಲಿ ಏನಾಗಿದೆಯೆಂದರೆ, ಯಾವ ಭಯೋತ್ಪಾದಕರು ಬೇಕಾದರೂ ಬಂದು ಇಲ್ಲಿ ಇದ್ದು ಹೋಗಬಹುದು ಎನ್ನತಕ್ಕಂಥ ಭಾವನೆ ಕೆಲವರಲ್ಲಿ ಬಂದಿದೆ. ಆದ್ದರಿಂದ ಎಚ್ಚರವಹಿಸಬೇಕು. ಪೊಲೀಸರಿಗೆ ಶಕ್ತಿ ಕೊಡಬೇಕು. ಪೊಲೀಸರಲ್ಲಿ ದಕ್ಷತೆ ಇರತಕ್ಕಂಥ ಅಧಿಕಾರಿಗಳನ್ನು ಇದಕ್ಕೆ ನಿಯೋಜಿಸಬೇಕು. ತಮ್ಮ ಸರ್ಕಾರ ಏನೇನು ಕ್ರಮಗಳನ್ನು

ಕೈಗೊಳ್ಳುತ್ತದೆ ಅದಕ್ಕೆ ನಮ್ಮ ಸಂಪೂರ್ಣವಾದ ಬೆಂಬಲವಿದೆ. ಈ ಬಗ್ಗೆ ತಾವು ಸರ್ವಾನುಮತದಿಂದ ಒಂದು ನಿರ್ಣಯವನ್ನು ಮಾಡಬೇಕು ಮತ್ತು ನಿಮ್ಮ ಸರ್ಕಾರಕ್ಕೆ ವಿರೋಧ ಪಕ್ಷಗಳು ನಮ್ಮೆಲ್ಲರಿಂದ ಏನೇನು ಸಹಕಾರ ಬೇಕೋ ಅದನ್ನು ಕೊಡುವುದಕ್ಕೆ ನಾವು ಸಿದ್ಧರಿದ್ದೇವೆ ಎನ್ನತಕ್ಕಂಥ ಮಾತನ್ನು ತಮ್ಮ ಮೂಲಕ ಹೇಳುತ್ತಿದ್ದೇನೆ.

† ಶ್ರೀ ಬಸವರಾಜ ರಾಯರೆಡ್ಡಿ:– ಮಾನ್ಯ ಅಧ್ಯಕ್ಷರೇ, ಮುಂಬೈಯಲ್ಲಿ ಎರಡು ದಿನಗಳ ಹಿಂದೆ 14 ಸ್ಥಳಗಳಲ್ಲಿ ಬಾಂಬ್ ಸ್ಫೋಟ ಮಾಡುವುದರ ಮೂಲಕ ಈ ಒಂದು ಹಿಂಸಾಕೃತ್ಯ ಏನು ನಡೆದಿದೆ, ಇದು ನಾವೆಲ್ಲರೂ ತಲೆ ತಗ್ಗಿಸುವಂಥ ವಿಚಾರ. ಏಕೆಂದರೆ ಮುಖ್ಯವಾಗಿ ಇದನ್ನು ಯಾರು ಮಾಡಿದ್ದಾರೆ ಎನ್ನುವುದನ್ನು ಇನ್ನೂ ಪತ್ತೆ ಹಚ್ಚುವುದಕ್ಕೆ ಆಗಿಲ್ಲ. ಆದರೆ ಎಲ್ಲಾ ಪಕ್ಷಗಳು ಇದನ್ನು ಖಂಡಿಸಬೇಕಾಗಿದೆ. ಮತ್ತು ಈ ದಿಸೆಯಲ್ಲಿ ಎಲ್ಲಾ ಪಕ್ಷಗಳು ಕೇಂದ್ರ ಸರ್ಕಾರಕ್ಕೆ ಸಹಕಾರವನ್ನು ಕೊಡಬೇಕಾದ್ದು ಅವರ ಕರ್ತವ್ಯ ಎಂದು ನಾನು ಭಾವಿಸುತ್ತೇನೆ.

ಈ ಒಂದು ಹಿಂಸಾಕೃತ್ಯ ಸುಮಾರು 300 ಜನರನ್ನು ಈಗಾಗಲೇ ಬಲಿ ತೆಗೆದುಕೊಂಡಿದೆ. ಸುಮಾರು 1500 ಜನರು ಗಾಯಗೊಂಡಿದ್ದಾರೆ. ಈ ಕೃತ್ಯವನ್ನು ಮುಖ್ಯವಾಗಿ ಪರದೇಶದ ಕೆಲವು ಜನರು ಮಾಡಿದ್ದಾರೆ ಎನ್ನತಕ್ಕಂಥ ಶಂಕೆ ಕೂಡ ಅಲ್ಲಿ ವ್ಯಕ್ತಪಡಿಸಿದ್ದಾರೆ. ಇದರ ಬಗ್ಗೆ ಸಮಗ್ರವಾದಂಥ ತನಿಖೆ ನಡೆಯುತ್ತಿದೆ. ಈಗ ನಾನು ಕೇಳುವುದು ಇಷ್ಟೆ, ನಮ್ಮ ರಾಜ್ಯ ಸರ್ಕಾರ, ಮಹಾರಾಷ್ಟ್ರ ಸರ್ಕಾರಕ್ಕೆ ಅಂದರೆ ಆ ಮುಖ್ಯಮಂತ್ರಿಗಳಿಗೆ ಕೆಲವು ಪರಿಹಾರವನ್ನು ಕಳುಹಿಸಿಕೊಡುತ್ತೇವೆ ಎಂದು ನಮ್ಮ ಮುಖ್ಯ ಮಂತ್ರಿಗಳು ಕೂಡ ಹೇಳಿದ್ದಾರೆ. ದಯವಿಟ್ಟು ಪರಿಹಾರವನ್ನು ಏನು ಕೊಡುತ್ತಾರೆ ಎನ್ನುವುದರ ಬಗ್ಗೆ ತಾವು ಇನ್ನೂ ಪ್ರಕಟಣೆ ಮಾಡಿಲ್ಲ. ದಯವಿಟ್ಟು ಆ ಪ್ರಕಟಣೆಯನ್ನು ತಾವು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ ಮತ್ತು ವಾಟಾಳ್ ನಾಗರಾಜ್ ಅವರು ಉತ್ತಮವಾದ ಒಂದು ಸಲಹೆಯನ್ನು ಕೊಟ್ಟಿದ್ದಾರೆ.

ನಾವು ಎಲ್ಲಾ ಶಾಸಕರು ಸೇರಿ ನಮ್ಮ ಒಂದು ತಿಂಗಳ ಪಗಾರವನ್ನೋ ಅಥವಾ ತಾವು ಅಧ್ಯಕ್ಷರು ಏನು ನಿಗದಿಪಡಿಸಿದ್ದೀರಿ, ಆ ನಿಗದಿಪಡಿಸಿರುವ ಪ್ರಕಾರ ನಾವು ಸ್ವಲ್ಪ ಪರಿಹಾರ ಧನವನ್ನು ಅಲ್ಲಿಯ ಜನರಿಗೆ ಕಳಿಸಿಕೊಟ್ಟರೆ ಅನುಕೂಲವಾಗುತ್ತದೆ ಎಂದು ನಾನು ಭಾವಿಸುತ್ತೇನೆ. ಕೊನೆಯದಾಗಿ ಈ ಹಿಂಸಾ ಕೃತ್ಯದ ಖಂಡನೆಯ ಬಗ್ಗೆ ಸರ್ಕಾರ ಒಂದು ನಿರ್ಣಯವನ್ನು ಮಂಡಿಸಬೇಕು ಮತ್ತು ಎಲ್ಲರೂ ಸರ್ವಾನುಮತದಿಂದ ಖಂಡನೆಯನ್ನು ಮಾಡಬೇಕು ಎಂದು ತಮ್ಮ ಮೂಲಕ ನಾನು ಕೇಳಿಕೊಳ್ಳುತ್ತೇನೆ.

†·ಶ್ರೀ ಕೆ.ಎಸ್. ಈಶ್ವರಪ್ಪ:– ಸನ್ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಇಡೀ ಕರ್ನಾಟಕ ಜನತೆಯ ಮನಸ್ಸನ್ನು ಅರ್ಥ ಮಾಡಿಕೊಂಡು ಈ ಒಂದು ದುಷ್ಕೃತ್ಯ ಯಾರು ನಡೆಸಿದ್ದಾರೆ ಅದರ ವಿರುದ್ಧವಾಗಿ ಸಂಪೂರ್ಣ ಬೆಂಬಲವನ್ನು ತಮ್ಮ ಪ್ರಕಟಣೆಯ ಮೂಲಕ ಕೇಂದ್ರ ಸರ್ಕಾರಕ್ಕೆ ತಿಳಿಸಿರುವುದು ನಿಜಕ್ಕೂ ಅಭಿನಂದನಾರ್ಹ. ಈ ಬಾಂಬೆ ಬಾಂಬಿನ ದುಷ್ಕೃತ್ಯದಲ್ಲಿ ದೊಡ್ಡ ಜಾಲ ಇರುವುದರಲ್ಲಿ ಏನೂ ಅನುಮಾನ ಇಲ್ಲ. ಹಿಂದೆ ಒಂದು ಸಾರಿ ನಮ್ಮ ರಾಷ್ಟ್ರಕ್ಕೆ ಗಂಡಾಂತರ ಬಂದಾಗ ಆಗಿನ ಪ್ರಧಾನಮಂತ್ರಿಗಳಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರಿಗೆ ಎಲ್ಲಾ ಪಕ್ಷಗಳವರೂ ಸಹ ಪಕ್ಷ ಭೇದ ಮರೆತು ಬೆಂಬಲ ಕೊಟ್ಟರತಕ್ಕಂಥ ಸಂದರ್ಭ ನನಗೆ ನೆನಪಿಗೆ ಬರುತ್ತಿದೆ. ಆಗಿನ ಸಂದರ್ಭದಲ್ಲಿ ನಮ್ಮ ಪಕ್ಷದ ನಾಯಕರಾದಂತಹ ಮಾನ್ಯ ಅಟಲ್ ಬಿಹಾರಿ ವಾಜಪೇಯಿ ಅವರಿಗೆ ಒಂದು ಪ್ರಶ್ನೆ ಕೇಳಿದಾಗ ನಿಮ್ಮ ನಾಯಕರು ಯಾರು ಎಂದು ಕೇಳಿದಾಗ ಇಂತಹ ಸಂದರ್ಭದಲ್ಲಿ ನಮ್ಮಲ್ಲಿ ಪಕ್ಷ ಭೇದ ಇಲ್ಲ, ನಮ್ಮ ನಾಯಕಿ ಇಂದಿರಾಗಾಂಧಿ ಎಂದು ಒಪ್ಪಿದ್ದರು. ಅಂತಹ ಸ್ಥಿತಿ ಇವತ್ತು ಬಂದಿದೆ ಎಂದು ನನಗನ್ನಿಸುತ್ತಾ ಇದೆ. ಪಕ್ಷ ಭೇದ ಮರೆತು ನಾವೆಲ್ಲರೂ ಕೂಡ ಕೇಂದ್ರ ಸರ್ಕಾರದ ಪ್ರಧಾನಮಂತ್ರಿಗಳಿಗೆ ಇಂತಹ ಸಂದರ್ಭದಲ್ಲಿ ಬೆಂಬಲ

ಸೂಚಿಸಿ, ಈ ರಾಷ್ಟ್ರದ್ರೋಹಿ ಕೃತ್ಯಗಳು ಏನು ಪ್ರಾರಂಭ ಆಗಿದೆ, ಇದು ಪ್ರತಿಯೊಬ್ಬ ರಾಷ್ಟ್ರ ಭಕ್ತನಿಗೂ ಕೂಡ ಒಂದು ರೀತಿಯ ಚಿಂತೆ ಉಂಟುಮಾಡುವಂತಹ ಸಂದರ್ಭ ಇಲ್ಲಿ ಬಂದಿದೆ ಎಂದು ನನಗೆ ಅನಿಸುತ್ತಿದೆ. ಒಂದೇ ಸಾರಿ 14 ಕಡೆಗಳಲ್ಲಿ ಈ ರೀತಿಯ ದುಷ್ಕೃತ್ಯಗಳು ನಡೆದಿರುವುದು ಇಡೀ ದೇಶಕ್ಕೆ ಒಂದು ರೀತಿಯ ಸವಾಲು ಎಂದು ನನಗೆ ಅನಿಸುತ್ತಿದೆ. ಈ ಸವಾಲನ್ನು ನಾವು ಸ್ವೀಕಾರ ಮಾಡಬೇಕಾಗುತ್ತದೆ. ಪಕ್ಷ, ಪ್ರಾಂತ್ಯ, ಭಾಷೆ ಎಲ್ಲಾ ಭೇದವನ್ನು ಮರೆತು ವಿದೇಶಿ ಶಕ್ತಿ ಏನು ದುಷ್ಕೃತ್ಯ ನಡೆಸಿದ್ದಾರೆ, ಇದನ್ನು ಖಂಡಿತ ಸಹಿಸುವುದಕ್ಕೆ ಸಾಧ್ಯ ಇಲ್ಲ, ಇಡೀ ದೇಶ ಒಂದಾಗಿ ನಾವು ಹೋರಾಟ ಮಾಡುವುದಕ್ಕೆ ವಿರೋಧ ಮಾಡುವುದಕ್ಕೆ ತಯಾರಾಗಿದ್ದೇವೆ ಎಂದಾಗ ಮಾತ್ರ ಇಂತಹ ದುಷ್ಕೃತ್ಯಗಳನ್ನು ಮಟ್ಟ ಹಾಕುವುದಕ್ಕೆ ಸಾಧ್ಯವಾಗುತ್ತದೆ. ಈ ದಿಕ್ಕಿನಲ್ಲಿ ನಮ್ಮ ಪ್ರಧಾನ ಮಂತ್ರಿಗಳು ಪ್ರಯತ್ನ ಮಾಡುತ್ತಿದ್ದಾರೆ. ಒಂದೇ ದಿನ ಒಂದೇ ಬಾರಿಗೆ 300 ಜನ ಸತ್ತಿರುವುದು ನಿಜಕ್ಕೂ ಸಹ ನಾವೆಲ್ಲರೂ ತಲೆತಗ್ಗಿಸತಕ್ಕ ಅಂಶ. ಈಗ ಶ್ರೀಯುತ ವಾಟಾಳ್ ನಾಗರಾಜ್ ಅವರು ಹಣ ಕೊಡಬೇಕೆಂದು ತಿಳಿಸಿದ್ದಾರೆ. ಹಣ ಕೊಡೋಣ. ಅದರಲ್ಲಿ ಬೇರೆ ಪ್ರಶ್ನೆ ಇಲ್ಲ. ಆದರೆ ಈಗ ಆ ಒಂದು ಸಂದರ್ಭದಲ್ಲಿ ರಕ್ತಕ್ಕಾಗಿ ಹಾಹಾಕಾರ ನಡೆಯುತ್ತಿರುವಂತಹ ಅಂಶವನ್ನು ನಾವು ಪತ್ರಿಕೆಯಲ್ಲಿ ಓದಿದ್ದೇವೆ. ಯುವಕರು, ಸಿಕ್ಕಾಪಟ್ಟೆ ಜನ, ಕ್ಯೂ ನಿಂತಿರುವ ಫೋಟೊಗಳನ್ನು ಕೂಡ ನೋಡಿದ್ದೇವೆ. ನನಗೆ ಅನಿಸುತ್ತಿದೆ, ಇವತ್ತು ನಮ್ಮ ಎಲ್ಲ ಶಾಸಕರು ಕೂಡ ಇಲ್ಲಿ ಒಂದು ಬ್ಲಡ್ ಬ್ಯಾಂಕ್ ಮಾಡಿಕೊಂಡು ರಕ್ತ ಸಂಗ್ರಹ ಮಾಡಿ ಆ ಒಂದು ತೊಂದರೆಯನ್ನು ಅನುಭವಿಸುತ್ತಿರುವಂತಹ ವ್ಯಕ್ತಿಗಳಿಗೆ ರಕ್ತ ಕಳಿಹಿಸುವಂತಹ ದಿಕ್ಕಿನಲ್ಲಿಯೂ ಕೂಡ ನಮ್ಮ ಮುಖ್ಯಮಂತ್ರಿಗಳು ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ ಮತ್ತು ಈ ಸಂದರ್ಭದಲ್ಲಿ ನಾನು ಒಂದೇ ಒಂದು ಕೊನೆಯ ಅಂಶ ಹೇಳಿ ನನ್ನ ಮಾತನ್ನು ಮುಗಿಸುವುದಕ್ಕೆ ಇಷ್ಟಪಡುತ್ತೇನೆ. ಇಂತಹ ಸಂದರ್ಭದಲ್ಲಿ ಇಡೀ ದೇಶ ಏನು ಮಾಡುತ್ತಿದೆ ಎಂಬುದನ್ನು ವಿದೇಶಿ ಶಕ್ತಿಗಳು ನೋಡುತ್ತಾ ಇರುತ್ತವೆ. ನಾವೆಲ್ಲ ಒಗ್ಗಟ್ಟಾಗಿ ಇದನ್ನು ಹೋರಾಟ ಮಾಡುವುದಕ್ಕೋಸ್ಕರ ಸಿದ್ಧವಾಗಬೇಕು. ಪ್ರಧಾನ ಮಂತ್ರಿಗಳಿಗೆ ನಾವೆಲ್ಲಾ ಬೆಂಬಲವಾಗಿ ನಿಂತುಕೊಳ್ಳಬೇಕೆಂದು ಮಾತ್ರ ಈ ಸಂದರ್ಭದಲ್ಲಿ ತಿಳಿಸುತ್ತಾ, ಆ ನೊಂದ ಕುಟುಂಬಗಳಿಗೆ ಯಾವ್ಯಾವ ರೀತಿಯಲ್ಲಿ ಅನುಕೂಲ ಮಾಡಿಕೊಡಬೇಕು, ಅದಕ್ಕೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳು ಮಾಡುತ್ತಿವೆ. ನಮ್ಮ ಮುಖ್ಯಮಂತ್ರಿಗಳು ಕೂಡ ಅದಕ್ಕೆ ಈಗಾಗಲೇ ಬೆಂಬಲ ಸೂಚಿಸಿದ್ದಾರೆ. ಇಡೀ ಸದನ ಅಷ್ಟೇ ಅಲ್ಲ, ಇಡೀ ಕರ್ನಾಟಕ ರಾಜ್ಯದ ಜನತೆ ಬೆಂಬಲ ಕೊಡುವುದಕ್ಕೆ ತಯಾರಾಗಿದ್ದಾರೆ. ಅದರ ಸಂಪೂರ್ಣವಾದ ಬಳಕೆಯನ್ನು ನಮ್ಮ ರಾಜ್ಯದ ಸರ್ಕಾರ ಮಾಡಿಕೊಳ್ಳಬೇಕು ಎಂದು ಮಾತ್ರ ಈ ಸಂದರ್ಭದಲ್ಲಿ ತಿಳಿಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೈ.ಕೆ. ರಾಮಯ್ಯ:– ಸನ್ಮಾನ್ಯ ಅಧ್ಯಕ್ಷರೆ, ಮೊನ್ನೆ ಬಾಂಬೆಯಲ್ಲಿ ನಡೆದಂತಹ ಅಕೃತ್ಯದ ಬಗ್ಗೆ ಈ ಸದನದ ಸದಸ್ಯ ಮಿತ್ರರು ಏನು ಭಾವನೆಯನ್ನು ವ್ಯಕ್ತ ಮಾಡಿದ್ದಾರೋ ಆ ಭಾವನೆಗೆ ನಾನೂ ಧ್ವನಿಗೂಡಿಸುತ್ತೇನೆ. ಪ್ರಮುಖವಾದ ವಿಷಯ ಏನು ಎಂದರೆ, ಇತ್ತೀಚಿನ ವರ್ಷಗಳಲ್ಲಿ ಈ ದೇಶದಲ್ಲಿ ಇಂದಿರಾಗಾಂಧಿ ಅವರ ಕೊಲೆಯಿಂದ ಹಿಡಿದು, ರಾಜೀವ್‌ಗಾಂಧಿ ಅವರ ಕೊಲೆಯಿಂದ ಹಿಡಿದು ಶಾಂತಿಯುತವಾಗಿ ಬದುಕಲಿಕ್ಕೆ ಯಾರಿಗೂ ಸಾಧ್ಯ ಆಗುತ್ತಿಲ್ಲವೇನೋ ಎಂಬ ಒಂದು ವಾತಾವರಣ ಸೃಷ್ಟಿ ಆಗುತ್ತಿದೆ. ಇಂತಹ ಒಂದು ವಾತಾವರಣವನ್ನು ಸೃಷ್ಟಿ ಮಾಡುವಂತಹ ಕೈ ಯಾವುದು ? ಇದು ಬಹಳ ಪ್ರಾಮುಖ್ಯವಾದ ಸಮಸ್ಯೆ. ಬಾಂಬೆಯಲ್ಲಿ ಈ ಒಂದು ಅಕೃತ್ಯ ನಡೆದುಹೋಗಿದೆ, ಜನ ಸತ್ತಿದ್ದಾರೆ. ಪ್ರಾಣ ಹಾನಿ ಆಗಿದೆ. ಆಸ್ತಿ ಹಾನಿ ಆಗಿದೆ. ಮನುಕುಲದ ಎದೆ ನಡುಗಿಸುವಂತಹ ಘಟನೆ ನಡೆದಿದೆ. ಬಹುಶಃ ಇಷ್ಟೊಂದು ಜನ, ಇಷ್ಟೊಂದು ವ್ಯಾಪಕವಾದಂತಹ ರೀತಿಯಲ್ಲಿ ಸತ್ತಿದ್ದನ್ನು ನಾವಂತೂ ಕೇಳಿರಲಿಲ್ಲ.

ಈಗ ಪ್ರಶ್ನೆ ಇರುವುದು ಏನೆಂದರೆ ಪತ್ರಿಕೆಗಳ ವರದಿಗಳ ಪ್ರಕಾರ ಇದರಲ್ಲಿ ವಿದೇಶಿ ಕೈವಾಡ

ಇದೆಯೆಂಬುದು ಒಂದು ವಾದವಾದರೆ, ನಮ್ಮ ದೇಶದವರೇ ಆದಂಥ ತಮಿಳು ವ್ಯಾಘ್ರರ ಕೈವಾಡವಿದೆಯೆಂದು ಮತ್ತೊಂದು ವಾದ ಇದೆ. ಅಲ್ಲದೆ, ಮತೀಯ ಶಕ್ತಿಗಳ ಕೈವಾಡವಿದೆಯೆಂದು ಇನ್ನೊಂದು ವ್ಯಾಖ್ಯಾನವಿದೆ. ಇದರ ಜೊತೆಗೆ ಮಹಾರಾಷ್ಟ್ರದಲ್ಲಿರತಕ್ಕಂಥ ಆಂತರಿಕ ರಾಜಕೀಯ ಕೂಡ ಇದಕ್ಕೆ ಕಾರಣವಿದ್ದರೂ ಇರಬಹುದು ಎನ್ನುವಂಥ ಅನುಮಾನವೂ ಇದೆ. ಇದ್ಯಾವುದೇ ಕಾರಣವಿರಲಿ, ಈ ಅಕೃತ್ಯಕ್ಕೆ ಕಾರಣರಾದವರನ್ನು ಕಂಡುಹಿಡಿದು, ಅವರಿಗೆ ತಕ್ಕ ಶಿಕ್ಷೆಯನ್ನು ಕೇಂದ್ರ ಸರ್ಕಾರ ವಿಧಿಸಬೇಕೆಂದು ಹೇಳಿ, ನನ್ನ ಮಿತ್ರರು ಈ ಅಕೃತ್ಯದ ಬಗ್ಗೆ ತಮ್ಮ ವ್ಯಾಕುಲತೆಯನ್ನು, ಅನುಕಂಪವನ್ನು ಏನು ವ್ಯಕ್ತ ಮಾಡಿದರು, ಅದೇ ರೀತಿ ನಾನೂ ಸಹ ನನ್ನ ಪಕ್ಷದ ಪರವಾಗಿ ಅವರ ಜೊತೆ ಧ್ವನಿಗೂಡಿಸುತ್ತೇನೆ. ಸತ್ತಂಥವರಿಗೆ ಈ ಸದನದಲ್ಲಿ ಸಾಂತ್ವನ ಹೇಳಿ, ಅವರ ಕುಟುಂಬಗಳಿಗೆ ಮುಖ್ಯ ಮಂತ್ರಿಗಳು ಹಣದ ನೆರವು ಕೊಡುತ್ತೇವೆಂದು ಹೇಳಿದ್ದಾರೆ. ನಮಗೆ ಪೂರ್ತಿ ಸಂಬಳ ಕೊಡುವುದು ಕಷ್ಟವಾಗುತ್ತದೆ, ಆ ವಿಷಯ ನಮ್ಮ ಚರ್ಚೆಯ ವ್ಯಾಪ್ತಿಗೆ ಬರುವುದಿಲ್ಲ. ಆದುದರಿಂದ, ಸತ್ತವರ ಕುಟುಂಬಗಳಿಗೆ ಸಾಂತ್ವನ ಹೇಳುವಂಥ ಒಂದು ನಿಲುವಳಿ ಸೂಚನೆಯನ್ನು ಮಾನ್ಯ ಮುಖ್ಯಮಂತ್ರಿಗಳು ತರಬೇಕೆಂದು ಹೇಳುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, ಈ ದಿವಸ ಇಡೀ ರಾಷ್ಟ್ರ ವಿಶೇಷವಾಗಿ ತಲ್ಲಣಗೊಳ್ಳತಕ್ಕಂಥ ಒಂದು ಪರಿಸ್ಥಿತಿ ಮುಂಬೈನಲ್ಲಿ ನಡೆದಂಥ ಭಯೋತ್ಪಾದಕರ ಕೃತ್ಯದಿಂದ ಉಂಟಾಗಿದೆ. ಈ ವಿಚಾರವನ್ನು ಅತ್ಯಂತ ಕಳಕಳಿಯಿಂದ ನಮ್ಮ ವಿರೋಧಪಕ್ಷದ ಉಪ ನಾಯಕರಾದಂಥ ಶ್ರೀ ಸಿದ್ಧರವರು, ವಾಟಾಳ್ ನಾಗರಾಜ್‌ರವರು, ಬಸವರಾಜರಾಯರೆಡ್ಡಿಯವರು, ಈಶ್ವರಪ್ಪನವರು ಹಾಗೂ ವೈ.ಕೆ. ರಾಮಯ್ಯನವರು ಇವೊತ್ತಿನ ದಿವಸ ಎತ್ತಿದ್ದಾರೆ, ಮತ್ತು ನಮ್ಮ ಕರ್ನಾಟಕ ಸರ್ಕಾರ, ಕರ್ನಾಟಕ ರಾಜ್ಯದ ಜನತೆ ಹಾಗೂ ಶಾಸಕರುಗಳನ್ನೊಳಗೊಂಡಂತೆ ನಾವುಗಳು ಎಲ್ಲಾ ರೀತಿಯ ನೆರವನ್ನು ಮಹಾರಾಷ್ಟ್ರ ಸರ್ಕಾರಕ್ಕೆ ಕೊಡಬೇಕೆಂದು ಕೂಡ ವಿಶೇಷವಾಗಿ ಇವೊತ್ತು ಹೃತ್ಪೂರ್ವಕವಾದ ಕರೆಯನ್ನು ಕೊಟ್ಟಿದ್ದಾರೆ. ನಾವೆಲ್ಲರೂ ಕೂಡ ಆ ಕಡೆ ಇರುವ ಸದಸ್ಯರು, ಈ ಕಡೆ ಇರುವ ಸದಸ್ಯರುಗಳೆಲ್ಲರೂ ಕೂಡಿ ಇದುವರೆವಿಗೂ ದೇಶದಲ್ಲಿ ನಡೆಯದಿರತಕ್ಕಂಥ ಏನು ಒಂದು ದುಷ್ಕೃತ್ಯ ಮುಂಬೈ ನಗರದಲ್ಲಿ ನಡೆದಿದೆ, ಅದರ ಬಗ್ಗೆ ನಮ್ಮ ವಿಶೇಷವಾದ ಒಂದು ಶೋಕವನ್ನು ವ್ಯಕ್ತಪಡಿಸುವುದರ ಜೊತೆಗೆ ಕಳವಳವನ್ನು ವ್ಯಕ್ತಪಡಿಸುವುದರ ಜೊತೆಗೆ ಅಲ್ಲಿ ಅಮಾಯಕರು ತಮ್ಮ ಪ್ರಾಣವನ್ನು ಕಳೆದುಕೊಂಡಿರುವ ಬಗ್ಗೆ, ಅವರ ಸಂಬಂಧಿಕರಿಗೆ ನಮ್ಮ ಸಂತಾಪವನ್ನು ಸೂಚಿಸುವುದರ ಜೊತೆಗೆ ನಾವು ಇವೊತ್ತು ಇಡೀ ರಾಷ್ಟ್ರದ ಜನರು ಒಗ್ಗಟ್ಟಾಗಿ, ಭಯೋತ್ಪಾದನೆಯಿಂದ ಈ ದೇಶದ ಪ್ರಜಾಪ್ರಭುತ್ವವನ್ನು ಅಭದ್ರಗೊಳಿಸತಕ್ಕಂಥ ಮತ್ತು ನಮ್ಮ ದೇಶದ ಸುಭದ್ರತೆಯನ್ನು ಇವೊತ್ತು ವಿಶೇಷವಾಗಿ ಸ್ಫೋಟಿಸಿ, ನಮ್ಮ ದೇಶದ ಸಂಪೂರ್ಣವಾದ ವ್ಯಕ್ತಿತ್ವವನ್ನು ಸದೆಬಡಿಯತಕ್ಕಂಥ ಒಂದು ಕೃತ್ಯ, ಶಕ್ತಿ–ವ್ಯಕ್ತಿಗಳಿದ್ದರೂ ಕೂಡ ನಮ್ಮ ಐಕ್ಯತೆಯಿಂದ ಅಂತಹ ಶಕ್ತಿಯನ್ನು ಹಿಮ್ಮೆಟ್ಟಿಸತಕ್ಕಂಥ ಶಕ್ತಿ ಭರತ ಖಂಡದ ಜನರು ಯಾವಾಗಲೂ ಕೂಡ ಇಟ್ಟುಕೊಂಡು ಬಂದಿದ್ದಾರೆ. ಅನೇಕ ರೀತಿಯಲ್ಲಿ ದೇಶದ ಒಳಗಾಗಲಿ, ಹೊರಗಾಗಲಿ ಇಂತಹ ಒಂದು ಸಂಕಷ್ಟ ಅಥವಾ ಸವಾಲು ಬಂದಾಗ ಜಾತಿ–ಮತವನ್ನು ಬಿಟ್ಟು, ಪಕ್ಷ ಭೇದವನ್ನು ಬಿಟ್ಟು, ಪ್ರಾದೇಶಿಕ ಭೇದವನ್ನು ಬಿಟ್ಟು, ಭಾಷಾಬೇಧವನ್ನು ಬಿಟ್ಟು, ಎಲ್ಲಾ ವಿಚಾರಗಳಿಂದಲೂ ಮೆಟ್ಟಿ ನಿಂತು ನಾವು ನಮ್ಮ ಒಗ್ಗಟ್ಟಿನಿಂದ ಈ ದೇಶವನ್ನು ಸ್ವಾತಂತ್ರ್ಯ ಪಡೆದ ನಂತರ ಮಾತ್ರವಲ್ಲ ಹಿಂದಿನಿಂದಲೂ ಕೂಡ ಈ ರೀತಿಯ ಒಂದು ರಾಷ್ಟ್ರೀಯತೆಯ ಭಾವನೆ, ದೇಶದ ಮೇಲಿನ ಪ್ರೀತಿಗಾಗಿ, ತ್ಯಾಗ – ಬಲಿದಾನಗಳಿಗೆ ನಾವು ಯಾವಾಗಲೂ ಕೂಡ ವಿಶೇಷವಾದ ವ್ಯಕ್ತಿತ್ವವನ್ನು ಹೊಂದಿದವರಾಗಿದ್ದೇವೆ.

ಬಾಂಬೆ ನಗರದಲ್ಲಿ ಏನು ಒಂದು ರೀತಿಯ ಘಟನೆ ನಡೆಯಿತು ಅದು ನಿಗೂಢವೂ ಹೌದು, ಯೋಜಿತವೂ ಹೌದು. ಇಂಥ ಒಂದು ದುಷ್ಕೃತ್ಯ ಮುಂಬೈನಲ್ಲಿ ಏನು ನಡೆದಿದೆ ಅದನ್ನು ಇಡೀ ಸದನ ಮತ್ತು ಇಡೀ ಕರ್ನಾಟಕ ರಾಜ್ಯದ ಜನತೆ ಖಂಡಿಸುತ್ತದೆ ಮತ್ತು ರಾಷ್ಟ್ರಕ್ಕೆ ಬಂದಂಥ ಇಂಥ ಒಂದು ಸವಾಲನ್ನು ಎದುರಿಸುವುದರಲ್ಲಿ ಈ ಸದನ ಮತ್ತು ಕರ್ನಾಟಕ ರಾಜ್ಯದ ಜನತೆ ನಮ್ಮ ದೇಶದ ಪ್ರಧಾನಿಗಳಾದಂಥ ಸನ್ಮಾನ್ಯ ಪಿ.ವಿ. ನರಸಿಂಹರಾಯರ ಜೊತೆಯಲ್ಲಿ ಇರುತ್ತೇವೆ. ಇಂಥ ಒಂದು ದುಷ್ಟಶಕ್ತಿಯನ್ನು ಸದೆಬಡಿಯಲು ನಾವು ಮಾನಸಿಕವಾಗಿ, ದೈಹಿಕವಾಗಿ ಸಿದ್ಧರಾಗಿದ್ದೇವೆ ಎನ್ನತಕ್ಕ ವಿಚಾರವನ್ನು ಸ್ಪಷ್ಟವಾಗಿ ಈ ಸದನ ಪ್ರತಿಸ್ಪಂದಿಸುತ್ತದೆ. ಒಂದೇ ಧ್ವನಿಯಿಂದ ಇಂಥ ಒಂದು ದುಷ್ಟ ಶಕ್ತಿಯನ್ನು ಎದುರಿಸಲು ಪ್ರಧಾನ ಮಂತ್ರಿಗಳಾದ ಪಿ.ವಿ. ನರಸಿಂಹರಾಯರಿಗೆ ಬೆಂಬಲವನ್ನು ನೀಡುತ್ತಿದ್ದೇವೆ ಎನ್ನತಕ್ಕ ವಿಚಾರಕ್ಕೆ ಕೂಡ ಎಲ್ಲಾ ಸದಸ್ಯರು ಪ್ರತಿಧ್ವನಿಸಿದ್ದಾರೆ. ಇಷ್ಟು ಮಾತ್ರ ಅಲ್ಲ, ಅಲ್ಲಿ ಏನು ದುಷ್ಟ ಶಕ್ತಿಗಳು ಈ ಘಟನೆಗೆ ಕಾರಣರಾಗಿದ್ದಾರೆ ಅವರನ್ನು ಖಂಡಿತವಾಗಿ ಗುರುತಿಸಲು ಅದು ಕೇಂದ್ರ ಸರ್ಕಾರವಾಗಲಿ, ಮಹಾರಾಷ್ಟ್ರ ಸರ್ಕಾರವಾಗಲಿ ಅಥವಾ ನಮ್ಮ ಸರ್ಕಾರವಾಗಲಿ, ಅದಕ್ಕಿಂತಲೂ ಹೆಚ್ಚಾಗಿ ಒಂದು ಎಚ್ಚರ ಪ್ರಜ್ಞೆ ಏನು ನಮ್ಮ ರಾಷ್ಟ್ರದ ಜನರಲ್ಲಿ ಇದೆ. ಇದರಿಂದ ಖಂಡಿತವಾಗಿ ಆ ಆರೋಪಿಗಳನ್ನು ಗುರುತಿಸಿ ಸಮಸ್ಯೆಯನ್ನು ಎದುರಿಸುತ್ತೇವೆ ಮತ್ತು ಖಂಡಿತವಾಗಿ ಇಂಥ ಶಕ್ತಿ ಮತ್ತೆ ದೇಶದ ಯಾವ ಮೂಲೆಯಲ್ಲೇ ಆಗಲಿ, ತಲೆ ಎತ್ತದಂತೆ ಮಾಡುತ್ತೇವೆ, ಅದನ್ನು ಸಂಪೂರ್ಣವಾಗಿ ನಿರ್ನಾಮ ಮಾಡುತ್ತೇವೆ ಎನ್ನತಕ್ಕ ಸಂಕಲ್ಪದ ಧ್ವನಿ ಕೂಡ ಈ ಸದನದಿಂದ ಒಡಮೂಡಿ ಬಂದಿದೆ. ರಾಜ್ಯದ ಜನತೆಯೂ ಸಹ ಇದರೊಂದಿಗೆ ಸ್ಪಂದಿಸುತ್ತಾ ಇದ್ದಾರೆ. ಬಾಂಬೆಯ ವರ್ತಮಾನ ತಿಳಿದ ಕೂಡಲೆ ನಮ್ಮ ಕರ್ನಾಟಕದಲ್ಲಿ ನಮ್ಮ ಸರ್ಕಾರ ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳನ್ನು ಕರೆಯಿಸಿ ಅವರೊಂದಿಗೆ ವಿಮರ್ಶೆ ಮಾಡಿ ನಾವು ಎಲ್ಲಾ ಕಡೆಯಲ್ಲಿಯೂ ಕೂಡ ಇಂಥ ಶಕ್ತಿಗಳಾಗಲಿ, ವ್ಯಕ್ತಿಗಳಾಗಲಿ ಪ್ರದೇಶಿಸುವುದಾಗಲಿ ಮತ್ತು ಪ್ರವೇಶ ಮಾಡುವುದನ್ನು ಗುರುತಿಸತಕ್ಕ ರೀತಿಯಲ್ಲಿ ಮತ್ತು ಯಾವ ರೀತಿಯಲ್ಲೂ ನಮ್ಮ ನಾಗರೀಕರಿಗೆ ಸಾವು ನೋವು ಬಾರದ ಹಾಗೆ ನಾಗರೀಕರ ಆಸ್ತಿಯನ್ನು ಜೋಪಾನವಾಗಿ ರಕ್ಷಣೆ ಮಾಡತಕ್ಕ ದೃಷ್ಟಿಯಲ್ಲಿ ನಾವು ಕಣ್ಣಿನಲ್ಲಿ ಕಣ್ಣನ್ನು ಇಟ್ಟು ಎಚ್ಚರ ವಹಿಸಿದ್ದೇವೆ. ಇದರ ಬಗ್ಗೆ ನಾವು ಎಲ್ಲಾ ಕಡೆಯೂ ಕೂಡ ಸರಿಯಾದಂಥ ಒಂದು ಕ್ರಮವನ್ನು ಮತ್ತು ನಿಗವನ್ನು ಇಟ್ಟಿದ್ದೇವೆ. ಆದುದರಿಂದ ಸಾರ್ವಜನಿಕರಿಗೆ ವಿಧಾನಸೌದಕ್ಕೆ ಮತ್ತು ಇತರೆ ಮುಖ್ಯವಾದ ಪ್ರದೇಶಕ್ಕೆ ಪ್ರವೇಶ ಮಾಡುವುದಕ್ಕೆ ಸ್ವಲ್ಪ ತೊಂದರೆಯಾಗಬಹುದು. ಅದಕ್ಕೆ ಖಂಡಿತವಾಗಿ ಸರ್ಕಾರದೊಂದಿಗೆ ಸಹಕರಿಸುತ್ತೀರಿ ಎಂಬ ನಂಬಿಕೆಯನ್ನು, ಭಾವನೆಯನ್ನು ಇಟ್ಟುಕೊಂಡಿದ್ದೇನೆ ಮತ್ತು ಆ ಘಟನೆಯು ಬಾಂಬೆಯಲ್ಲಿ ನಡೆದ ರಾತ್ರಿಯೇ ಮಹಾರಾಷ್ಟ್ರದ ಮುಖ್ಯ ಮಂತ್ರಿಗಳಾದ ಸನ್ಮಾನ್ಯ ಶರದ್ ಪವಾರ್‌ರವರನ್ನು ಫೋನ್‌ನಲ್ಲಿ ಸಂಪರ್ಕ ಮಾಡಿ ಕರ್ನಾಟಕ ರಾಜ್ಯ ಸರ್ಕಾರ, ಕರ್ನಾಟಕ ರಾಜ್ಯದ ಜನತೆ ಇಂಥ ದುಷ್ಕೃತ್ಯವನ್ನು ಖಂಡಿಸುತ್ತದೆ ಮತ್ತು ತಮ್ಮ ಜೊತೆಯಲ್ಲಿ ಸದಾ ಬೆಂಬಲವಾಗಿರುತ್ತದೆ ಹಾಗೂ ಇಂಥ ದುಷ್ಟ ಶಕ್ತಿಗಳನ್ನು ಎದುರಿಸಲು ಮತ್ತು ಜನತೆಗೆ ಪುನರ್ವಸತಿಯನ್ನು ಕಲ್ಪಿಸಲು ಸಹಾಯವನ್ನು ಖಂಡಿತವಾಗಿ ನೀಡುತ್ತೇವೆ ಎಂದು ತಮ್ಮಗಳ ಪರವಾಗಿ ಮತ್ತು ಈ ರಾಜ್ಯದ ಜನತೆಯ ಪರವಾಗಿ ಅವರಿಗೆ ಈಗಾಗಲೆ ಆಶ್ವಾಸನೆಯನ್ನು ಕೊಟ್ಟಿದ್ದೇನೆ ಮತ್ತು ತಾವು ಕೂಡ ಇದಕ್ಕೆ ಸಹಮತವನ್ನು ಹೊಂದಿದ ಕಾರಣ ತಕ್ಷಣವೇ ಕರ್ನಾಟಕ ಸರ್ಕಾರದಿಂದ 25 ಲಕ್ಷ ರೂಪಾಯಿಗಳ ಚೆಕ್ಕನ್ನು ಮಹಾರಾಷ್ಟ್ರದ ಮುಖ್ಯಮಂತ್ರಿಯವರಿಗೆ ಅಲ್ಲಿನ ಪುನರ್ವಸತಿಯ ಕೆಲಸಕ್ಕೆ ಒದಗಿಸಿಕೊಡುತ್ತಿದ್ದೇವೆ. ಇನ್ನೂ ಹೆಚ್ಚಿನ ಸಹಾಯ ಬೇಕಾಗಿದ್ದರೆ ನಮ್ಮ ಕರ್ನಾಟಕ ಸರ್ಕಾರ ಕೊಡಲು ಸಿದ್ಧವಾಗಿದ್ದೇವೆ ಮತ್ತೆ ಶಾಸಕರಾದ ತಾವುಗಳು ಏನು ಅದರ ಬಗ್ಗೆ ಸದ್ಭಾವನೆಯನ್ನು ವ್ಯಕ್ತಪಡಿಸಿದ್ದೀರಿ ಮತ್ತು ಇದಕ್ಕೆ ಬೇಕಾದಂಥ ಕೊಡುಗೆಯನ್ನು, ಹಣದ ರೂಪದಲ್ಲಿ ಕೊಡುತ್ತೇವೆಂದು ಏನು ಹೇಳಿದ್ದೀರಿ ಅದು ಸ್ವಾಗತಾರ್ಹವಾದ ವಿಚಾರ, ಅದನ್ನು ಕಲೆಕ್ಟ್ ಮಾಡಿ ಅವರಿಗೆ

ಕಳಿಸಿಕೊಡೋಣ. ಸನ್ಮಾನ್ಯ ಈಶ್ವರಪ್ಪನವರು ಮತ್ತೂ ವಿಶೇಷವಾಗಿ ರಕ್ತದಾನವನ್ನು ಮಾಡುವ ಬಗ್ಗೆ ಮಾತನಾಡಿದ್ದಾರೆ. ಅದರ ಬಗ್ಗೆ ಅಲ್ಲಿನ ಸರ್ಕಾರದೊಂದಿಗೆ ಮಾತನಾಡಿ ಅದರ ಅವಶ್ಯಕತೆ ಇದೆಯೇ ಎಂದು ಕೇಳಿ ತಿಳಿದುಕೊಳ್ಳುತ್ತೇನೆ. ನಮ್ಮ ರಾಜ್ಯದ ಜನ ಯುವಕರು ತಮ್ಮಲ್ಲಿರುವ ರಕ್ತವನ್ನು ರಾಷ್ಟ್ರಕ್ಕಾಗಿ ಕೊಡಲು ಸದಾ ಸಿದ್ಧರಾಗಿದ್ದಾರೆ.

ನಮ್ಮ ಶಾಸಕರಾಗಲಿ, ಯುವಕರಾಗಲಿ ರಕ್ತದಾನ ಮಾಡುವುದಕ್ಕೆ ಸಿದ್ಧವಾಗಿದ್ದೇವೆ. ಇದರ ಬಗ್ಗೆ ಕೂಡಲೇ ಅವರನ್ನು ಸಂಪರ್ಕಿಸಿ ಮಾತನಾಡುತ್ತೇನೆ. ತಾವು ಒಪ್ಪುವುದಾದರೆ ಇಲ್ಲಿ ಒಂದು ನಿರ್ಣಯವನ್ನು ಮಾಡೋಣ. ಈಗ ಈ ನಿರ್ಣಯವನ್ನು ನಾನು ಓದಿ ಹೇಳುತ್ತೇನೆ.

ನಿರ್ಣಯ

"ಮುಂಬಯಿಯಲ್ಲಿ ಇತ್ತೀಚೆಗೆ ನಡೆದ ಘೋರ ಹಿಂಸಾಕೃತ್ಯದಿಂದ ಇಡೀ ಭಾರತ ತಲ್ಲಣಗೊಂಡಿದೆ. ಈ ಅಕೃತ್ಯದಿಂದ ಸಾವು ನೋವಿಗೆ ಈಡಾದ ಜನರಿಗೆ ಅತ್ಯಂತ ಕಳಕಳಿಯ ಸಾಂತ್ವನವನ್ನು ಈ ಸಭೆಯು ಸೂಚಿಸುತ್ತದೆ. ಇಂಥ ಭಯಾನಕ, ಭಯೋತ್ಪಾದಕ ಕೃತ್ಯವನ್ನು ಈ ಸಭೆ ತೀವ್ರವಾಗಿ ಖಂಡಿಸುತ್ತದೆ. ಅಲ್ಲದೆ ಮಹಾರಾಷ್ಟ್ರ ಸರ್ಕಾರಕ್ಕೆ ಕರ್ನಾಟಕ ರಾಜ್ಯ ಸರ್ಕಾರ ಮತ್ತು ಕರ್ನಾಟಕ ರಾಜ್ಯದ ಜನತೆ ಅವಶ್ಯಕವಾದ ಸಹಾಯವನ್ನು ನೀಡುವುದಾಗಿ ಸಭೆ ತೀರ್ಮಾನಿಸುತ್ತದೆ. ಇಂಥ ದುಷ್ಕೃತ್ಯಕ್ಕೆ ಕಾರಣವಾದ ಶಕ್ತಿ, ವ್ಯಕ್ತಿಗಳನ್ನು ಕಂಡುಹಿಡಿದು ಇಂಥ ಘಟನೆಗಳು ಈ ದೇಶದಲ್ಲಿ ಮುಂದೆ ಬಾರದಂತೆ ಹತ್ತಿಕ್ಕುವ ಎಲ್ಲ ಕ್ರಮಗಳನ್ನೂ ತೆಗೆದುಕೊಳ್ಳಲು ಮಾನ್ಯ ಪ್ರಧಾನಮಂತ್ರಿಯವರಾದ ಶ್ರೀ ಪಿ.ವಿ. ನರಸಿಂಹರಾಯರಿಗೆ ಸಕಲ ನೆರವನ್ನೂ, ಬೆಂಬಲವನ್ನೂ ಈ ಸಭೆಯು ನೀಡಲು ತೀರ್ಮಾನಿಸುತ್ತದೆ. ಈ ನಿರ್ಣಯವನ್ನು ಈ ಸಭೆ ಒಕ್ಕೊರಲಿನಿಂದ ತೀರ್ಮಾನಿಸುತ್ತದೆ".

ಕರ್ನಾಟಕ ಸರ್ಕಾರದ ಪರವಾಗಿ ಹೇಳುವುದಾದರೆ, ಇಂಥ ದುಷ್ಟ ಶಕ್ತಿಗಳನ್ನು ಅಥವಾ ಇದಕ್ಕೆ ಪ್ರಚೋದನೆ ಮಾಡತಕ್ಕ ಅಥವಾ ದುಷ್ಕೃತ್ಯಕ್ಕೆ ಮನಸ್ಸು ಮಾಡತಕ್ಕ ಎಲ್ಲ ಶಕ್ತಿಗಳನ್ನೂ ನಾವು ಗುರುತಿಸಿ ಹತ್ತಿಕ್ಕುತ್ತೇವೆ ಎನ್ನತಕ್ಕ ಮಾತನ್ನು ಈ ಸದನದ ಪರವಾಗಿ ರಾಷ್ಟ್ರದ ರಾಜ್ಯದ ಜನತೆಗೆ ಹೇಳಿ, ಸದ್ಭಾವನೆಗಳನ್ನು ವ್ಯಕ್ತಪಡಿಸಿದ ಮಾನ್ಯ ಸದಸ್ಯರಿಗೆ ವಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ನಾವು ಇದನ್ನು ಅನುಮೋದಿಸುತ್ತೇವೆ.

2. ಮೈಸೂರು ನಗರದಲ್ಲಿ ಭೀಕರ ಕಾಲರಾ ರೋಗ

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):– ಮಾನ್ಯ ಅಧ್ಯಕ್ಷರೆ, ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಮೈಸೂರು ನಗರದಲ್ಲಿ ಕಾಲರಾ ರೋಗ ಭೀಕರವಾಗಿ, ತೀವ್ರವಾಗಿ ಹರಡುತ್ತಿದೆ. ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಮೈಸೂರು ನಗರಕ್ಕೆ ಬಂದಿದ್ದರು. ಕೆಲವು ಆಸ್ಪತ್ರೆಗಳಿಗೆ ಭೇಟಿ ಮಾಡಿದ್ದಾರೆ. ಮುಂದೆ ಈ ಕಾಲರಾ ಬೇರೆ ಕಡೆಗೆ ಹರಡದ ರೀತಿಯಲ್ಲಿ ನೋಡಿಕೊಳ್ಳಬೇಕೆಂದು ಅಲ್ಲಿನ ಅಧಿಕಾರಿಗಳಿಗೆ ಎಚ್ಚರಿಕೆಯನ್ನು ಕೊಟ್ಟು ಬಂದಿದ್ದಾರೆ. ಕಳೆದ ಒಂದೂವರೆ ತಿಂಗಳಿಂದ ಈ ರೋಗ ಹರಡುತ್ತಾ ಬಂದಿದೆ. ನಾನೂ ಕೂಡ ನಿನ್ನೆ ಆಸ್ಪತ್ರೆಗೆ ಭೇಟಿ ಮಾಡಿದ್ದೆ. ನಿನ್ನೆ 5 ಗಂಟೆಗೆ ತಾವೂ ಹೋಗಿದ್ದಿರಿ. ತಾವು ಬರುತ್ತೀರೆಂದು ಆಸ್ಪತ್ರೆಯ ಆವರಣದಲ್ಲಿ ಮಣ್ಣು ಬೂದಿ ಮುಂತಾದ್ದನ್ನೆಲ್ಲಾ ಹಾಕಿ ಸ್ವಲ್ಪ ಸ್ವಚ್ಛವಾಗಿ ಇಟ್ಟಿದ್ದರು. ಆ ಆಸ್ಪತ್ರೆ ಇರತಕ್ಕ ಸ್ಥಿತಿಯನ್ನು ನೋಡಿದರೆ, ಆ ಪರಿಸರವನ್ನು ನೋಡಿದರೆ ನರಕದಂತೆ ಕಾಣಿಸುತ್ತದೆ. ಇದು ಕೇವಲ ಮೈಸೂರು ಒಂದೇ ಅಲ್ಲ; ಮೈಸೂರಿನ ಸುತ್ತಮುತ್ತ ಈ ರೋಗ ಹಬ್ಬತಕ್ಕ ವಾತಾವರಣ ಇದೆ. ಈಗಾಗಲೇ